ದಿನಾಂಕಃ 23.08.2024
(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ 2ನೇ ಪ್ರತಿವಾದಿ ಪರ ಶ್ರೀ.ಎಸ್.ಎಸ್. ವಕೀಲರಿಂದಃ

1. 6ನೇ ಪ್ರತಿವಾದಿ ನನ್ನ ತಂಗಿ. ಸದರಿಯವರು ಅಂಗನವಾಡಿ ಆಯಾ ಆಗಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಸದರಿಯವರನ್ನು ಸುಣ್ಣಗಟ್ಟ ಗ್ರಾಮದ ಯಳವೇಗೌಡರಿಗೆ ಕೊಟ್ಟು ಸುಮಾರು 20 ವರ್ಷಗಳ ಹಿಂದೆ ಮದುವೆ ಮಾಡಿಲಾಯಿತು. 6ನೇ ಪ್ರತಿವಾದಿ ಮದುವೆಯಾದಾಗಿನಿಂದಲೂ ಸುಣ್ಣಗಟ್ಟ ಗ್ರಾಮದಲ್ಲಿಯೇ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ನನ್ನ ತಮ್ಮ, 2ನೇ ಪ್ರತಿವಾದಿ ಮಂಡ್ಯ,, ಚನ್ನಪಟ್ಟಣ, ಬೆಂಗಳೂರಿನಲ್ಲಿ ವಾಸ ಮಾಡಿಕೊಂಡು ಇದ್ದರು ಎಂದರೆ ಸುಮ್ಮನೆ ಓಡಾಡಿಕೊಂಡು ಇದ್ದರು ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿ ಚಿಕ್ಕ ವಯಸ್ಸಿನಿಂದಲೂ ಒಟ್ಟು ಕುಟುಂಬದಲ್ಲಿ ವಾಸವಾಗಿಲ್ಲ ಎಂದರೆ ಸಾಕ್ಷಿ ಒಟ್ಟು ಕುಟುಂಬದಲ್ಲೇ ವಾಸವಾಗಿದ್ದೆವು ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿ ಸುಮಾರು 40 ವರ್ಷಗಳ ಹಿಂದೆಯೇ ಮದುವೆ ಮಾಡಿಕೊಂಡಿದ್ದಾರೆ. 2ನೇ ಪ್ರತಿವಾದಿಗೆ ಪ್ರಸ್ತುತ 60 ವರ್ಷ ವಯಸ್ಸು. 2ನೇ ಪ್ರತಿವಾದಿಯು ವಿವಾಹವಾದ ನಂತರ ಬಿ.ವಿ ಹಳ್ಳಿ ಗ್ರಾಮದ ಸೊಸೈಟಿ ಪುಟ್ಟಸ್ವಾಮಿ ,ನಾರಾಯಣಗೌಡ ಮತ್ತು ಶಿವಮಲ್ಲೇಗೌಡ ರವರ ಮನೆಗಳಲ್ಲಿ ಬೋಗ್ಯ ಮತ್ತು ಬಾಡಿಗೆದಾರನಾಗಿ ವಾಸವಾಗಿದ್ದರು ಎಂದರೆ ಸರಿ. ನಂತರ ದಾವಾ ಷೆಡ್ಯೂಲ್ ಐಟಂ ನಂ 3 ರಲ್ಲಿ ಗರಿ ಶೆಡ್ಡನ್ನು ನಿರ್ಮಾಣ ಮಾಡಿ ವಾಸವಾಗಿದ್ದರು ಎಂದರೆ ಸರಿ. ಸದರಿ ಗರಿ ಶೆಡ್ಡು 2017 ರಲ್ಲಿ ಮಳೆ ಗಾಳಿಗೆ ಬಿದ್ದು ಹೋಯಿತು ಎಂದರೆ ಸರಿಯಲ್ಲ. ಸದರಿ ಗರಿ ಶೆಡ್ ನ ಜಾಗದಲ್ಲಿ ಮನೆ ನಿರ್ಮಾಣ ಮಾಡಲು ಹೋದಾಗ ನಾನು ನನ್ನ ಹೆಂಡತಿ ಮತ್ತು ನನ್ನ ಸೋದರಮಾವನ ಮಗ ಕುಳ್ಳು ಅಲಿಯಾಸ್ ನಾಗೇಶ್ ರವರು ಜಗಳ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಗಲಾಟೆಯ ವಿಚಾರವಾಗಿ ಅಕ್ಕೂರು ಪೋಲೀಸ್ ಠಾಣೆಯಲ್ಲಿ ದೂರು

ದಾಖಲಾಗಿತ್ತು ಎಂದರೆ ಸರಿ. ಪೋಲೀಸರು ಸ್ಥಳಕ್ಕೆ ಬಂದು ಇದು ಸಿವಿಲ್ ವ್ಯಾಜ್ಯವಾಗಿದ್ದು ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ಬುದ್ದಿವಾದ ಹೇಳಿರುತ್ತಾರೆ ಎಂದರೆ ಸರಿ. ಇದಾದ ಬಳಿಕವೇ ನಾವು ದಾವಾ ಸಲ್ಲಿಸಿರುವುದು ಎಂದರೆ ಸರಿ.

2. ನನ್ನ ತಂದೆಗೆ ಸೇರಿದ 1 ಎಕರೆ 26 ಗುಂಟೆ ಪಿತ್ರಾರ್ಜಿತ ಸ್ವತ್ತು ಇದ್ದು ನನ್ನ ತಂದೆಯ ಸ್ವಯಾರ್ಜಿತ 1 ಎಕರೆ, 7 ನಿವೇಶನ ಮತ್ತು 4 ಗುಂಟೆ ಸ್ವತ್ತು ಸ್ವತ್ತುಗಳು ಇರುತ್ತವೆ. ದಾವಾ ಸ್ವತ್ತು ಐಟಂ ನಂ.3 ಸರ್ವೆ ನಂ.169 ರ 7 ಗುಂಟೆ ಸ್ವತ್ತು ಮೂಲತಃ ನನ್ನ ತಂದೆಗೆ ಸೇರಿದ್ದು. ಸದರಿ ಸ್ವತ್ತು ನನ್ನ ತಂದೆ ಸಂಕಲಗೆರೆ ಗ್ರಾಮದ ಕೇಶವಮೂರ್ತಿ ರವರಿಂದ ಕ್ರಯಕ್ಕೆ ಪಡೆದಿರುವುದು ಎಂದರೆ ಸರಿ. ಸದರಿ ಸ್ವತ್ತು ನಮ್ಮ ತಂದೆ 2 ನೇ ಪ್ರತಿವಾದಿ ಜಯರಾಮು ರವರಿಗೆ ಪಂಚಾಯಿತಿ ಪಾರಿಕತ್ ಮೂಲಕ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಿಃ13.03.1990 ರಲ್ಲಿ ನಮ್ಮ ಊರಿನ ನಾಗರಾಜು ಮತ್ತು ಶಿವಮಲ್ಲೇಗೌಡರವರನ್ನು ಸಾಕ್ಷಿದರರಾಗಿ ಮಾಡಿ ಅವರ ಸಮಕ್ಷಮ ಮೇಲೆ ಹೇಳಿದ ಪಂಚಾಯತ್ ಪಾರಿಕತ್ತು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಪಂಚಾಯತ್ ಪಾರಿಕತ್್ ನ ಪ್ರಕಾರ 2 ನೇ ಪ್ರತಿವಾದಿಯೇ ದಾವಾ ಷೆಡ್ಯೂಲ್ ಐಟಂ ನಂ.3 ರ ಮಾಲೀಕರು ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸದರಿ 7 ಗುಂಟೆ ಸ್ವತ್ತಿನಲ್ಲಿ 2 ನೇ ಪ್ರತಿವಾದಿ ಮನೆ ನಿರ್ಮಾಣ ಮಾಡಿಕೊಂಡು ವಾಸವಾಗಿದ್ದಾರೆ ಎಂದರೆ ಸರಿ.

3. ಬಿ.ವಿ ಹಳ್ಳಿ ಕುನ್ನೇಗೌಡರ ಮಗ ಪುಟ್ಟಸ್ವಾಮಿ ಎಂದರೆ ನಾನೇ. ಸದರಿ ಪಂಚಾಯತ್ ಪಾರಿಕತ್ತ್ ನ ಛಾಪಾಕಾಗದ ನನ್ನ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ಸದರಿ ಛಾಪಾಕಾಗದವನ್ನು ನಾನೇ ತಂದು ಕೊಟ್ಟು ನನ್ನ ಸಮಕ್ಷಮವೇ ಸದರಿ ಪಂಚಾಯತ್ ಪಾರಿಕತ್ತ್ ಬರೆಯಲಾಗಿದೆ ಎಂದರೆ ಸರಿಯಲ್ಲ. ಬಿ.ವಿ ಹಳ್ಳಿ ಗ್ರಾಮದ ತಮ್ಮಣ್ಣನ ಮಗ ಮಲ್ಲೇಶ್ ನನಗೆ ಗೊತ್ತು.

(ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ಎನ್.ಉಷಾರಾಣಿ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಚನ್ನಪಟ್ಟಣ.